ಬಾದಾಮಿಯಲ್ಲಿ ೧೩೦ ಕೆ. ವಿ. ವಿದ್ಯುತ್ ಯೋಜನೆಯನ್ನು ಮಂಜೂರು ಮಾಡುವ ಬಗ್ಗೆ

೧೭೦೦. ಶ್ರೀ ಎಸ್. ಜಿ. ನಂಜಯ್ಯನಮಠ್ (ಗುಳೇದಗುಡ್ಡ).—ಮಾನ್ಯ ವಿದ್ಯುಚ್ಛಕ್ತಿ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಬಾದಾಮಿಯಲ್ಲಿ ೧೩೦ ಕೆ. ವಿ. ವಿದ್ಯುತ್ ಯೋಜನೆಯನ್ನು ಮಂಜೂರು ಮಾಡಲಾಗಿದೆಯೇ ?

(ಆ) ಹಾಗಿದ್ದಲ್ಲಿ ಅಗತ್ಯವಾದ ನಿವೇಶನವನ್ನು ಸರ್ಕಾರವು ನೀಡಿದೆಯೆ ?

(ಇ) ಈ ಯೋಜನೆಯನ್ನು ಯಾವಾಗ ಆರಂಭಿಸಲಾಗುವುದು

(ಈ) ಹುನಗುಂಡ ತಾಲ್ಲೂಕಿನ ಅಮಿನಗಡದಲ್ಲಿಯೂ ೧೩೦ ಕೆ. ವಿ. ಯೋಜನೆಯನ್ನು ಮಂಜೂರು ಮಾಡಲಾಗಿದೆಯೇ ?

(ಉ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

(ಊ) ಅಗತ್ಯವಾದ ನಿವೇಶನವನ್ನೇನಾದರೂ ಸರ್ಕಾರ ನೀಡಿದೆಯೆ ?

(ಋ) ಸಾರ್ವಜನಿಕರು ಉಚಿತವಾಗಿ ಜಮೀನು ಕೊಟ್ಟಲ್ಲಿ ಅಲ್ಲಿಯೇ ಈ ಯೋಜನೆಯನ್ನು ಪ್ರಾರಂಭಿಸಲಾಗುವುದೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

(ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ೧೩೦ ಕೆ. ವಿ. ವಿದ್ಯುತ್ ಜಾಲ ಇಲ್ಲ ಮತ್ತು ಬಾದಾಮಿಗೆ ೧೩೦ ಕೆ. ವಿ ವಿದ್ಯುತ್ ಯೋಜನೆ ಮಂಜೂರಾಗಿಲ್ಲ. ಆದರೆ ಇಲ್ಲಿ ೩೩/೧೧ ಕೆ.ವಿ. ಗೆ ಎಂ.ವಿ.ಎ ಸಾಮರ್ಥ್ಯದ ಸಬ್ ಸ್ಟೇಷನ್ ಹಾಕಲು ಯೋಜಿಸಿದೆ.

(ಆ) ಸರ್ಕಾರ ನಿವೇಶನವನ್ನು ನೀಡಿಲ್ಲ. ೩೩ ಕೆ. ವಿ. ಸ್ಟೇಷನ್ನಿಗೆ ಬೇಕಾಗುವ ನಿವೇಶನ ಸಿಕ್ಕಿದೆ.

(ಇ) ೧೩೦ ಕೆ. ವಿ. ಯೋಜನೆ ಉದ್ದೇಶಿಸಿಲ್ಲವಾದ್ದರಿಂದ ಇದು ಉದ್ಭವಿಸುವುದಿಲ್ಲ.

(ಈ) ಅಮಿನಗಡಕ್ಕೆ ೧೩೦ ಕೆ. ವಿ. ಯೋಜನೆ ಮಂಜೂರಾಗಿಲ್ಲ. ಆದರೆ ಇಲ್ಲಿ ೩೩/೧೧ ಕೆ. ವಿ. ಗೆ ಎಂ.ವಿ.ಎ. ಸಾಮರ್ಥ್ಯದ ಸಬ್ ಸ್ಟೇಷನ್ ಹಾಕಲು ಯೋಜಿಸಿದೆ.

(ಉ) ೧೩೦ ಕೆ. ವಿ. ಯೋಜನೆ ಉದ್ದೇಶಿಸಿಲ್ಲವಾದ್ದರಿಂದ ಇದು ಉದ್ಭವಿಸುವುದಿಲ್ಲ.

(ಊ) ಸರ್ಕಾರ ನಿವೇಶನ ನೀಡಿಲ್ಲ. ೩೩ ಕೆ. ವಿ. ಸ್ಟೇಷನ್ನಿಗೆ ಬೇಕಾಗುವ ನಿವೇಶನ ಸಿಕ್ಕಿದೆ.

(ಋ) ಸಾರ್ವಜನಿಕರು ಉಚಿತವಾಗಿ ಜಮೀನು ಕೊಟ್ಟಲ್ಲೆಲ್ಲಾ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಆಗುವುದಿಲ್ಲ. ವಿದ್ಯುತ್ ಉಪ ಕೇಂದ್ರಗಳ ಅವಶ್ಯಕತೆ ಎಲ್ಲೆಲ್ಲಿ ಅಗತ್ಯವಾಗಿ ಕಂಡು ಬರುತ್ತದೆಯೋ ಅಂತಹ ಸ್ಥಳಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಲ್ಲವನ್ನೂ ಕೂಲಂಕುಷವಾಗಿ ಪರಿಶೀಲಿಸಿ ಉಪ ಯುಕ್ತವಾದ ಸ್ಥಳಗಳಲ್ಲಿ ಮತ್ತು ಅವಶ್ಯಕತೆ ಇದ್ದಲ್ಲಿ ಮಾತ್ರ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ತಾಲ್ಲೂಕು ಮಟ್ಟದಲ್ಲಿ ೨೦ ಅಂಶಗಳ ಕಾರ್ಯಕ್ರಮದ ಸಭೆ

೧೧೦೯. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ತಾಲ್ಲೂಕು ಮಟ್ಟದ ೨೦ ಅಂಶ ಕಾರ್ಯಕ್ರಮದ ಸಭೆಗೆ ಅಧಿಕಾರೇತರ ಸದಸ್ಯರುಗಳನ್ನು ನಿರ್ಬಿನೇ ಮಾರ್ಚ್ ಸರ್ಕಾರ ನೇಮಿಸಲಾಗಿದೆಯೇ ಹಾಗೂ ರಾಜ್ಯದಲ್ಲಿ ಎಲ್ಲಾ ತಾಲ್ಲೂಕಿಗೆ ಸೇರಿ ಎಷ್ಟು ಜನರನ್ನು ನಿಯಮಿಸಲಾಗಿದೆ ?